**<u>ಅಸಲು ದಾವಾ ಸಂಖ್ಯೆ - 181/2014</u>** **ಡಿ.ಡಬ್ಲ್ಯೂ:-2**

ದಿನಾಂಕಃ **05.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :-ವಾದಿ ಪರ ವಕೀಲರಿಂದ :-</u>

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ಸಾಕ್ಷಿಗೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಲಿಂಗರಾಜಪ್ಪರವರ ಮಗ ಜೀವಂತ ಇರುವುದಿಲ್ಲ ಎಂದು ನಮೂದು ಮಾಡಿದ್ದು ಹಾಗೆ ಲಿಂಗರಾಜಪ್ಪನ ಮಗನ ಹೆಸರು ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಲಿಂಗರಾಜಪ್ಪರವರ ಮಗನ ಹೆಸರು ಶಶಿ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಲಿಂಗರಾಜಪ್ಪನ ಮಗನ ಹೆಸರು ಶಶಿ ಎಂಬುವುದನ್ನು ನಮೂದು ಮಾಡಿರುವುದಿಲ್ಲ. ಸಾಕ್ಷಿಗೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಸರ್ವೇ ನಂಬರ್ ಮತ್ತು ನಿಮಗೆ ಸೇರಿದ ಆಸ್ತಿಯ ಸರ್ವೇ ನಮೂದಾಗಿಲ್ಲ ಎಂದರೆ ಸಾಕ್ಷಿಯು ನಮೂದಾಗಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಕ್ಕದಲ್ಲಿ ನನ್ನ ಆಸ್ತಿ ಇರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಆಸ್ತಿ ತಮಗೆ ಸೇರಿದ್ದು ಎಂದು ತೋರಿಸಲು ಪಹಣಿ ಮತ್ತು ಮುಟೇಷನ್ ದಾಖಲೆಗಳನ್ನು ಸಲ್ಲಿಸಿದ್ದಾರೆ. ಪ್ರತಿವಾದಿಗಳು ದಾವಾ ಆಸ್ತಿ ತಮ್ಮ ಹೆಸರಿನಲ್ಲಿರುವ ಬಗ್ಗೆ ಪಹಣಿ ಮತ್ತು ಮುಟೇಷನ್ ಹಾಜರುಪಡಿಸಿರುವುದಿಲ್ಲ. ನಿಡಿ-3 ಕ್ರಯ ಪತ್ರದ ಆಸ್ತಿಯನ್ನು ಯಾರು ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-4 ಕ್ರಯ ಪತ್ರದ ಆಸ್ತಿಯನ್ನು ಯಾರು ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-5 ಕ್ರಯ ಪತ್ರದ ಅಡಿಯಲ್ಲಿ ಆಸ್ತಿಯನ್ನು ಯಾರು ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಪ್ರತಿವಾದಿಗಳ ಹೆಸರಿನಲ್ಲಿ ಪಹಣಿಯಾಗಲೀ ಮುಟೇಷನ್ ಆಗಲೀ ಇರುವುದಿಲ್ಲ. 2 ನೇ

ಪ್ರತಿವಾದಿ ಮತ್ತು ನಮ್ಮ ಜೊತೆ ಅನ್ಯೋನ್ಯತೆ ಇರುತ್ತದೆ. ನನಗೆ ಈ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ 2 ನೇ ಪ್ರತಿವಾದಿ ನನಗೆ ಆಪ್ತರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾಧೀನಾನುಭವದಲ್ಲಿದ್ದು ಅವರನ್ನು ಸ್ವಾಧೀನಾನುಭವದಿಂದ ಹೊರಹಾಕುವ ಉದ್ದೇಶದಿಂದ ಮತ್ತು ಪ್ರತಿವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವತ್ತೂ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿಲ್ಲದಿದ್ದರೂ ಸಹ ಸ್ವಾಧೀನಾನುಭವದಲ್ಲಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.